ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಚಿತ್ರಗುಪ್ತ ಮರಣಿಸುವುದು ಯಾವಾಗ?*



ಯಮನೂ ತನ್ನ ಡಿಪಾರ್ಟ್‌ಮೆಂಟನ್ನು ಕಂಪ್ಯೂಟರೈಸ್ ಮಾಡಿದ ನಂತರ.

ಶಿವಮೊಗ್ಗ ರಮೇಶ್, ಮೈಸೂರು

*ಮ್ಯಾಚ್ ಫಿಕ್ಸಿಂಗ್ ಮತ್ತು ಮ್ಯಾರೇಜ್ ಫಿಕ್ಸಿಂಗ್ ನಡುವಿನ ವ್ಯತ್ಯಾಸವೇನು?*

ಮ್ಯಾಚ್ ಫಿಕ್ಸಿಂಗ್‌ನಿಂದ ದುಡ್ಡು, ಮ್ಯಾರೇಜ್ ಫಿಕ್ಸಿಂಗ್‌ನಿಂದ ಲಡ್ಡು.

ಎಚ್.ಆನಂದ್ ಕುಮಾರ್, ಚಿತ್ರದುರ್ಗ

*ಕಳ್ಳನಿಗೂ, ಮಳ್ಳನಿಗೂ, ಸುಳ್ಳನಿಗೂ ಇರುವ ವ್ಯತ್ಯಾಸಗಳೇನೆಂದು ತಿಳಿಸಿ ರಾಮ್?*

ಇಂದಿನ ಮಂತ್ರಿ, ಪ್ರಧಾನಿ, ವಿತ್ತಮಂತ್ರಿಗಳಿಗೆ ಇರುವ ವ್ಯತ್ಯಾಸವೇ.

ಹೆಚ್.ಆರ್.ಕಡಿವಾಲ, ಬದಾಮಿ

*ದೇವರಿಗೆ ನಡೆದುಕೊಳ್ಳುವವರಲ್ಲಿ ಹೆಣ್ಣುಮಕ್ಕಳೇ ಜಾಸ್ತಿ. ಏಕೆ?*

ಪಾಪ! ಅವರು ಇನ್ನೇನು ಮಾಡಿಯಾರು! ಗಂಡ ಉಂಡಾಡಿ ಗುಂಡನಾದರೆ ಹೆಂಡತಿಗೆ ದೇವರೇ ಗತಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಗಂಡು- ಹೆಣ್ಣಿನ ಪ್ರೀತಿಗೂ, ರಾಜಕೀಯ ಮೈತ್ರಿಗೂ ಏನು ವ್ಯತ್ಯಾಸ ಸಾರ್?*



ಮೊದಲನೆಯದು ನಂಟು, ಎರಡನೆಯದು ಸ್ವಂಟು.

ಕಂಡಕ್ಟರ್ ರಾಜು, ಗುಬ್ಬಿ

*ಡಾಕ್ಟರ್ ತನ್ನ ಮಗ ಡಾಕ್ಟರ್ ಆಗಲಿ ಅಂದುಕೊಳ್ತಾನೆ, ಎಂಜಿನಿಯರ್ ತನ್ನ ಮಗ ಎಂಜಿನಿಯರ್ ಆಗಲಿ ಅಂದುಕೊಳ್ತಾನೆ. ಆದರೆ ರೈತ ತನ್ನ ಮಗ ರೈತ ಆಗಲಿ ಅಂದುಕೊಳ್ಳಲ್ಲ, ಯಾಕೆ?*

ರೈತನ ದುಡಿಮೆ ರಾಯಿತಕ್ಕೂ ಸಾಲದಂತೆ!

ಪದ್ಮಜಾ ಸುಂದರೇಶ್, ಮೈಸೂರು

*ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುವ ಸಿನಿಮಾ ತಾರೆಯರು ನಿಜಕ್ಕೂ ಆ ಉತ್ಪನ್ನಗಳನ್ನು ಬಳಸುತ್ತಾರೆಯೇ?*

ಖಂಡಿತ ಬಳಸುತ್ತಾರೆ ಜಾಹೀರಾತಿನ ಶೂಟಿಂಗ್ ಸಮಯದಲ್ಲಿ!

ಎಸ್.ಜಿ.ರಾಜಶೇಖರ ರೆಡ್ಡಿ, ಗೌರಿಬಿದನೂರು

*ಸುಂದರವಾದ ದೇವರ ವಿಗ್ರಹದ ಮುಂದೆ ನಿಂತು/ ಕೂತು ಕಣ್ಮುಚ್ಚಿ ಕೊಂಡು ಪ್ರಾರ್ಥಿಸುವುದಾದರೂ ಏಕೆ?*

ಕಣ್ತೆರೆದು ಕುಳಿತರೆ ಊರ್ವಶಿ ಬ್ರ್ಯಾಂಡ್ ಥಣ್ ಎಂದು ಪ್ರತ್ಯಕ್ಷವಾಗಿ ಪ್ರಾರ್ಥನೆಯ ಬದಲು ಪ್ರಣಯಗೀತೆ ಮೂಡೀತೆಂಬ ಭಯ!

ಎಚ್.ಆರ್. ದೇಸಾಯಿ, ರಾಯಚೂರು

*ವಾಸ್ತವಲೋಕದಲ್ಲಿ ವಿಹರಿಸುವುದಕ್ಕಿಂತ ಕನಸಿನ ಲೋಕದಲ್ಲಿ ವಿಹರಿಸಿದರೆ ಏಕೆ ಸಂತೋಷ?*

ಕಿಲೋಮೀಟರ್‌ಗಟ್ಟಲೆ ವಿಹರಿಸಿದರೂ ಒಂದು ರೂಪಾಯಿಯೂ ಖರ್ಚಾಗಲ್ವಲ್ಲ!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಇಲ್ಲೊಬ್ಬರ ಮನೆಯಲ್ಲಿ ಒಂದೇ ನಾಯಿ ಇದ್ದರೂ ನಾಯಿಗಳಿವೆ ಎಚ್ಚರಿಕೆ ಎಂಬ ಬೋರ್ಡು ಹಾಕಿರಲು ಕಾರಣ?*

ನಾಯಿ ಹೆಣ್ಣಂತೆ, ಗರ್ಭಿಣಿ! ಬೋರ್ಡ್ ಬರೆಯುವವನು ಕೊಂಚ ಮುಂಚೆಯೇ ತಂದುಕೊಟ್ಟುಬಿಟ್ಟನಂತೆ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಮೂರ್ಖರು ನಾಟಕದಲ್ಲಿ ನಿಮ್ಮ ಪಾತ್ರದ ಹೆಸರೇನು?*

ಮರೆತೇಬಿಟ್ಟರೇ? ಪ್ರಮುಖ ಪಾತ್ರ ನಿಮ್ಮದು, ನಾನು ನಿರ್ದೇಶಕ!

ಅನುರಾಧಾ ಎನ್.ವಿ. ಶಿವಮೊಗ್ಗ

*ನಾನು ಗಂಡಸು, ನನ್ನದೇ ನಡೆಯಬೇಕು ಎನ್ನುವ ಗಂಡಂದಿರಿಗೆ ನಿಮ್ಮ ಮಾರ್ಕ್ಸ್?*

ನೋ ಮಾರ್ಕ್ಸ್, ಓನ್ಲಿ ರಿಮಾರ್ಕ್ಸ್!

ಪಿ.ಜಿ.ರಾಘವೇಂದ್ರ, ಮೈಸೂರು

*ನಿರೀಕ್ಷಣಾ ಜಾಮೀನಿಗೂ, ಕ್ಷಮಾದಾನಕ್ಕೂ ಇರುವ ಅಂತರ...?*

ನಿರೀಕ್ಷಣಾ ಜಾಮೀನಿನಿಂದ ಅರೆಸ್ಟ್ ಮಾಡುವವರ ಸೈಲೆನ್ಸು, ಕ್ಷಮಾದಾನ ಅರೆಸ್ಟ್ ಆದವರಿಗೆ ಮತ್ತೆ ಅಪರಾಧ ಮಾಡಲು ಲೈಸೆನ್ಸು!

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಇಷ್ಟೆಲ್ಲಾ ವಾಹನಗಳಿದ್ದರೂ ಬದುಕನ್ನು ಜಟಕಾಬಂಡಿಗೇ ಏಕೆ ಹೋಲಿಸುತ್ತಾರೆ?*

ಬುದ್ಧಿಯೆಂಬ ಸಾರಥಿಯು ಮನಸ್ಸೆಂಬ ಕುದುರೆಯನ್ನು ನಿಯಂತ್ರಿಸುತ್ತಾ, ಆತ್ಮ ಪ್ರಾಣಗಳೆಂಬ ಗಾಲಿಗಳುಳ್ಳ ಶರೀರವೆಂಬ ಗಾಡಿಯನ್ನು ನಡೆಸುವುದರಿಂದ!

ಗೀತಾ ಬರ್ಲ, ಬೆಂಗಳೂರು

*ಮೋಹಕ್ಕೂ, ವ್ಯಾಮೋಹಕ್ಕೂ ಇರುವ ವ್ಯತ್ಯಾಸವೇನು?*

ಹೊಸ ಹೆಂಡತಿಯ ಮೇಲೆ ಇರುವುದು ಮೋಹ, ಪರ್ಮನೆಂಟಾಗಿ ಪ್ರೇಯಸಿಯ ಮೇಲೆ ಇರುವುದು ವ್ಯಾಮೋಹ!

ಪ್ರಹ್ಲಾದ ರಾಜು ಬುರ್ಲಿ, ದಾವಣಗೆರೆ

*ಹೆಂಡತಿ ಹೇಳುವ ಮಾತನ್ನು ಗಂಡ ಕೇಳಲೇಬೇಕೇನು?*

ಹೇಳಿದಾಗಲೇ ಕೇಳಿಸಿಕೊಳ್ಳುವುದು ಒಳ್ಳೆಯದು; ಇಲ್ಲವಾದರೆ ನಡುರಾತ್ರಿಯಲ್ಲಿ ಕೋಪ ಶಮನಗೊಳಿಸಿ, ಅಳು ನಿಲ್ಲಿಸಲು ಕೇಳಿಕೊಂಡು, ನಾಳೆ ಇನ್ನೇನೋ ಕೊಡಿಸುವ ಭರವಸೆ ಇತ್ತು, ಅದೇ ಮಾತನ್ನು ಕೇಳಬೇಕು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸುಳ್ಳೇ ಹೇಳದ ರಾಜಕೀಯ ನಾಯಕ, ಹೆಣ್ಣೇ ನೋಡದ ಸನ್ಯಾಸಿ ಯಾರಿದ್ದಾರೆ ಸರ್?*



ಹಾಗೆಲ್ಲಾ ಪ್ರಕೃತಿಗೆ ವಿರುದ್ಧವಾದುದನ್ನು ಬಯಸಬಾರದು ಆಚಾರ್ರೇ!

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ

*ರೌಡಿಗಳಿಗೆ ತಾಯಿಯ ಮೇಲೆ, ದೇವರ ಮೇಲೆ ತುಂಬಾ ಪ್ರೀತಿ ಇರತ್ತಲ್ಲಾ, ಯಾಕೆ?*

ಛೆ! ಅವರು ದೇವ್ರಾಣೆ, ತಾಯಾಣೆ.... ಇತ್ಯಾದಿ ತಾಯಿ, ದೇವರ ಶಬ್ದಗಳನ್ನು ಬಳಸೋದು ಕೇಳಿ ನೀವು ತಪ್ಪು ತಿಳಿದಿದ್ದೀರಿ ಅಷ್ಟೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಖಾರಗಳಲ್ಲಿ ಅತಿ ಹೆಚ್ಚು ಖಾರ ಯಾವುದು?*

ಅಹಂಖಾರ!

■ ರಾಮ್